**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಬನಹಟ್ಟಿ</u>**

**<u>ಸಿ.ಸಿ.ನಂಃ 1811/2025</u>**

| | | |
|---|---|---|
| ಫಿರ್ಯಾದುದಾರಃ | 1. | ಕರ್ನಾಟಕ ಸರ್ಕಾರದ ಪರ ತೇರದಾಳ ಪೋಲಿಸರು |
| | | ವಿರುದ್ಧ |
| ಆರೋಪಿತ | 1 | ಸಂಜಯ ತಂ. ಶಾಮು ಗಾಡಿವಡ್ಡರ,<br>ವಯಾ:38 ವರ್ಷ, ಉ: ಕೂಲಿ,<br>ಸಾ:ತೇರದಾಳ, ತಾ: ರಬಕವಿ-ಬನಹಟ್ಟಿ ಜಿಃ ಬಾಗಲಕೋಟೆ. |
| | 7 | ರಾಮು ತಂ. ಶಿವಪ್ಪ ಪಾತ್ರೋಟ<br>ವಯಾ:37 ವರ್ಷ, ಉ: ಕೂಲಿ,<br>ಸಾ:ತೇರದಾಳ, ತಾ: ರಬಕವಿ-ಬನಹಟ್ಟಿ ಜಿಃ ಬಾಗಲಕೋಟೆ |
| | 9 | ಪ್ರವೀಣ ತಂ. ಸುರೇಶ ಗಾಡಿವಡ್ಡರ,<br>ವಯಾ:23 ವರ್ಷ, ಉ: ಕೂಲಿ,<br>ಸಾ:ತೇರದಾಳ, ತಾ: ರಬಕವಿ-ಬನಹಟ್ಟಿ ಜಿಃ ಬಾಗಲಕೋಟೆ |

<u>ಆಪಾದನೆ</u>

ನಾನು ಸೌಮ್ಯಾ ಹೂಲಿ

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಬನಹಟ್ಟಿ.

| | | |
|---|---|---|
| ಆರೋಪಿಯಾದ ನೀವು, | 1 | ಸಂಜಯ ತಂ. ಶಾಮು ಗಾಡಿವಡ್ಡರ. |
| | 7 | ರಾಮು ತಂ. ಶಿವಪ್ಪ ಪಾತ್ರೋಟ. |
| | 9 | ಪ್ರವೀಣ ತಂ. ಸುರೇಶ ಗಾಡಿವಡ್ಡರ. |

ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆ,

ದಿನಾಂಕಃ 29.07.2025 ರಂದು 18.30 ಗಂಟೆ ಸಮಯದಲ್ಲಿ ತೇರದಾಳ ಪೋಲಿಸ ಠಾಣಾ ಸರಹದ್ದು, ಪೈಕಿ ತೇರದಾಳದ ದೇವರಾಜ ನಗರದಲ್ಲಿರುವ ಗಾಯತ್ರಿ ದೇವಿ ಗುಡಿ ಹತ್ತಿರ ಸಮೀಪ ಅರಣ್ಯ ಇಲಾಖೆಗೆ ಸಂಬಂದಿಸಿದ ಸಾರ್ವಜನಿಕ ಗುಡ್ಡದ ಖುಲ್ಲಾ ಜಾಗದಲ್ಲಿ ಆರೋಪಿತರಾದ ನೀವು ತಮ್ಮ ತಮ್ಮ ಪಾಯಿದೆಗೋಸ್ಕರ ಇಸ್ಪೇಟ ಎಲೆಗಳ ಸಹಾಯದಿಂದ ಹಣ ಪಣಕ್ಕೆ ಹಚ್ಚಿ ಅಂದರ ಬಾಹರ ಅಂಬುವ ಇಸ್ಪೀಟ ಜೂಜಾಟವನ್ನು ಆಡುತ್ತಿರುವಾಗ ಸಿಕ್ಕಿಬಿದ್ದ ಕಾರಣ ಕರ್ನಾಟಕ ಪೋಲಿಸ ಕಾಯಿದೆ ಕಲಂ 87 ರಡಿ ಶಿಕ್ಷಾರ್ಹ ಅಪರಾಧ ಎಸಗಿದ ಬಗ್ಗ ಆರೋಪಿಸಲಾಗಿದೆ?

ಸದರಿ ಆಪಾದನೆಗಳ ಬಗ್ಗ ವಿಚಾರಣೆಗೆ ಗುರಿಯಾಗಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

ಸದರಿ ಮೇಲಿನ ಆರೋಪಣೆಗಳನ್ನು ತೆರೆದ ನ್ಯಾಯಾಲಯದಲ್ಲಿ ದಿಃ23.12.2025 ರಂದು ಆರೋಪಿತರಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನಮೂದಿಸಿಕೊಳ್ಳಲಾಯಿತು.

ಈ ಮೇಲ್ಕಂಡ ಆರೋಪಗಳ ಬಗ್ಗ ವಿಚಾರಣೆಗೆ ಈ ಕೆಳಕಂಡಂತೆ ಆದೇಶಿಸುತ್ತೇನೆ.

ಪ್ರಶ್ನೆ-1:- ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ಓದಿ ಹೇಳಿದ್ದು ಅರ್ಥವಾಯಿತೇ?

ಉತ್ತರಃ ತಿಳಿಯಿತು

ಪ್ರಶ್ನೆ-2:- ಸದರೀ ಆಪಾದನೆಗಳನ್ನು ಒಪ್ಪಿಕೊಳ್ಳುವೆಯೋ? ಅಥವಾ ವಿಚಾರಣೆಯಾಗಬೇಕೋ?

ಉತ್ತರಃ ಒಪ್ಪಿಕೊಳ್ಳುತ್ತೇನೆ

ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಅವರ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸುತ್ತೇನೆ.

Sd/-

ಸ್ಥಳ: ಬನಹಟ್ಟಿ

ದಿಃ23.12.2025

(ಸೌಮ್ಯಾ ಹೂಲಿ)
ಸಿವಿಲ್ ಜಡ್ಜ್ & ಜೆ.ಎಮ್.ಎಫ್.ಸಿ.,
ಬನಹಟ್ಟಿ.

ಆರೋಪಿತರ ಸಹಿ:-

1

7

9